ಅ) ೭೦೦ ಅಥವಾ ಅದಕ್ಕಿಂತಲೂ ಕಡಿಮೆ ವೇತನದ, ಶ್ರೇಣಿಯು ಹುದ್ದೆಗಳಿಗೆ ಆ ಸ್ಥಳದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತವಲ್ಲವೆ.

ಇ) ಅಡಳಿತ ವರ್ಗದ ಈ ಮೇಲ್ಕಂಡ ನಿಯಮಗಳನ್ನು ಕಾರ್ಖಾನೆಯವರು ಪಾಲಿಸುತ್ತಿರುವರೆ ?

ಈ) ಹಾಗಿಲ್ಲದಿದ್ದರೆ ಕಾರಣವೇನು ?

ಉ) ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ನಿಜ.

ಆ) ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ಕೊಡಲಾಗುವುದು.

ಇ) ಹೌದು.

ಈ) ಮೇಲ್ಕಂಡ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

ಉ) ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

ಕೊಣ್ಣೂರು ಯಾತ ಚಿಕ್ಕ ನೀರಾವರಿಯ ಬಗ್ಗೆ

೧೯೭ ಶ್ರೀ ಮುತ್ತೆನ್ನವರ್ (ಗೋಕಾಕ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಗೋಕಾಕ ತಾಲ್ಲೂಕಿನ ಕೊಣ್ಣೂರು ಏತ ನೀರಾವರಿ ಯೋಜನೆಯನ್ನು ತೀವ್ರವಾಗಿ ಪ್ರಾರಂಭಿಸುವುದಾಗಿ ನೀಡಿದ ಭರವಸೆಯನ್ನು ಕಾರ್ಯಗತಗೊಳಿಸುವಲ್ಲಿ ಉಂಟಾಗಿರುವ ವಿಳಂಬಕ್ಕೆ ಕಾರಣಗಳೇನು ?

ಆ) ಈ ಏತ ನೀರಾವರಿ ಯೋಜನೆಯನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು ?

ಇ) ವಿಳಂಬಕ್ಕೆ ಕಾರಣರಾದವರ ವಿರುದ್ಧ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಈ ಯೋಜನೆಗೆ ಪ್ರೆಸ್ಟ್ರೆಸ್ಡ್ (Prestressed) ಸಿಮೆಂಟ್ ಕಾಂಕ್ರೀಟ್ ಪೈಪುಗಳನ್ನು ರೈಸಿಂಗ್ ಮೈನ್‌ಗೆ ಉಪಯೋಗಿಸಬೇಕಾದ್ದರಿಂದ ಇದನ್ನು ಒದಗಿಸುವ ತಯಾರಿಕೆ ಕಂಪನಿಯವರು ಒಳ್ಳೆಗುಣಮಟ್ಟದ ಸಿಮೆಂಟ್ ಅಭಾವದಿಂದ ತಡಮಾಡಿದರು. ಆದ್ದರಿಂದ ಪೈಪುಗಳ ಜೋಡಣೆಯ ಕೆಲಸವು ಕುಂಠಿತಗೊಂಡಿತು. ಎರಡನೆಯದಾಗಿ ಘಟಪ್ರಭಾ ನದಿಯಂ ಮಹಾಪೂರವು ತಕ್ಷಣ ಬಂದು ಈ ಪ್ರದೇಶ ಮುಳುಗಡೆಯಾಗಿ ಪೈಪ್ ಲೈನಂ ಇಡುವ ಕೆಲಸಕ್ಕೆ ಅಡಚಣೆ ಉಂಟಾಯಿತು. ಆದರೆ ಈಗ ಕೆಲಸವನ್ನು ಪುನರ್ ಆರಂಭಿಸಲಾಗಿದೆ.

ಆ) ಘಟಪ್ರಭಾ ನದಿಯ ಪ್ರವಾಹವು ಇಳಿಮುಖವಾದೊಡನೆ ಈ ಕೆಲಸವನ್ನು ತ್ವರಿತಗತಿಯಿಂದ ತೆಗೆದುಕೊಂಡು ನವೆಂಬರ್ ೧೯೮೩ರೊಳಗೆ ಮುಗಿಸಲಾಗುವುದು.

ಇ) ಮೇಲಿನ 'ಅ' ಮತ್ತು 'ಆ' ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆ, ನಾರಾಯಣಪುರದಲ್ಲಿ ಯಾತ ನೀರಾವರಿ ಯೋಜನೆ

೧೭೮ ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ)—ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ನಾರಾಯಣಪುರ ನೀರಾವರಿ ಅಣೆಕಟ್ಟನ್ನು ಉದ್ಘಾಟನೆ ಸಮಯದಲ್ಲಿ ಆಂದಿನ ಮುಖ್ಯ ಮಂತ್ರಿಯವರು ಯಾವಾಗಲೂ ಬರಗಾಲಕ್ಕೆ ತುತ್ತಾಗುವ ಬಿಜಾಪುರ ಪ್ರದೇಶಕ್ಕೆ ಐದು ಯಾತ ನೀರಾವರಿ ಯೋಜನೆಗಳಿಗೆ ಮಂಜೂರಾತಿ ನೀಡಿದ್ದು ನಿಜವೆ ;

(ಆ) ಹಾಗಿದ್ದಲ್ಲಿ, ಯೋಜನೆಗಳ ಹೆಸರುಗಳೇನು ಹಾಗೂ ಪ್ರತಿಯೊಂದು ಯಾತ ನೀರಾವರಿಯಿಂದ ನೀರಾವರಿಯಾಗುತ್ತಿರುವ ಪ್ರದೇಶದ ವಿಸ್ತೀರ್ಣವೆಷ್ಟು ;

(ಇ) ಮುಳಿವಾಡ ಏತ ನೀರಾವರಿ ಯೋಜನೆ ಬಿಜಾಪುರ, ಬಾಗೇವಾಡಿ ಹಾಗೂ ಸಿಂದ್ಗಿ ತಾಲ್ಲೂಕುಗಳ ಪ್ರದೇಶಗಳಿಗೆ ಪ್ರಯೋಜನಕಾರಿಯಾಗುವುದೆ ಹಾಗೂ ಹುನಗುಂದ ತಾಲೂಕಿನ ಹಿನ್ನೀರಿನ ಏತ ನೀರಾವರಿ ಯೋಜನೆಯೂ ಒಳಗೊಂಡಿರುವುದೆ ; ಹಾಗಿಲ್ಲದಿದ್ದಲ್ಲಿ, ಭೂಮಿ ಹಾಗೂ ಮನೆಗಳನ್ನು ಕಳೆದುಕೊಂಡ ಬಿಜಾಪುರದ ಜನತೆಗೆ ಸಹಾಯನೀಡಲು ಸರ್ಕಾರದವರು ಪರಿಶೀಲಿಸುವರೆ ;

(ಈ) ಬಿಜಾಪುರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಮುಳವಾಡ ಏತ ನೀರಾವರಿ ಯೋಜನೆಗೆ ಬಹಳ ಒತ್ತಾಯಿಸುತ್ತಿರುವುದು ಸರ್ಕಾರದವರಿಗೆ ತಿಳಿದಿರುವುದೆ ;

(ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಚುಕ್ಕಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಕೊಡಲಾದ ಉತ್ತರಗಳು

ಶ್ರೀ ಎಸ್. ಆರ್. ಬೊಮ್ಮಾಯಿ.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಪಂಡಿಸಿದ್ದೇನೆ.

ವನಮಹೋತ್ಸವದ ಅಂಗವಾಗಿ ಸರಕಾರದವರು ರಾಜ್ಯದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ

೨೨೨ ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಈ ಸಲ ವನಮಹೋತ್ಸವ ಅಂಗವಾಗಿ ಸರಕಾರದವರು ರಾಜ್ಯದಲ್ಲಿ ಕೈಗೊಂಡ ಕ್ರಮಗಳೇನು ?

ಆ) ಈ ಕಾರ್ಯಕ್ರಮಕ್ಕೆ ಸರಕಾರದವರಿಗೆ ತಗಲಿರುವ ವೆಚ್ಚವೆಷ್ಟು ?

ಇ) ಈ ಕಾರ್ಯಕ್ರಮವನ್ನು ಜಾರಿಗೆ ತರಲು ಸರಕಾರದವರು ಮಾಡಿದ ಪ್ರಯತ್ನಗಳೇನು ?

ಈ) ವನಮಹೋತ್ಸವದ ಅಂಗವಾಗಿ ಬೆಂಗಳೂರು ನಗರದಲ್ಲಿ ಸರಕಾರದವರು ಹಾಕಿಕೊಂಡ ಕಾರ್ಯಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸರ್ಕಾರದವರು ಸಂತ್ಕೊಲೆ ನಂ. ಎಫ್.ಎಫ್.ಡಿ. ೧೪೪ ಎಸ್.ಟಿ.ಎಸ್. ೮೩ ದಿನಾಂಕ ೨೪-೬-೮೩ ರಂತೆ ರಾಜ್ಯದಲ್ಲಿ ದಿನಾಂಕ ೪-೭-೮೩ ರಿಂದ ೧೦-೭-೮೩ ರವರೆಗೆ ವನ ಮಹೋತ್ಸವ ಸಪ್ತಾಹವನ್ನು ಆಚರಿಸಲು ಸುತ್ಕೊಲೆ ಕೊಟ್ಟಿರುತ್ತಾರೆ. ಇದನ್ವಯ ರಾಜ್ಯದ ಎಲ್ಲಾ ಕಡೆ ವಿವಿಧ ಹಂತಗಳಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲೆ, ನಗರ ಮಟ್ಟ ಆಯಾಮಿತ ಉತ್ಸಾಹದಿಂದ ಆಚರಿಸಲು ಬೃಹತ್ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಆ) ರೂ. ೫,೭೦,೨೧೦-೫೫ ಪೈ.

ಇ) ರಾಜ್ಯಾದ್ಯಂತ ಹೆಚ್ಚು ಮರ ನೆಡುವ ಕಾರ್ಯಕ್ರಮಗಳನ್ನು ಎಲ್ಲಾ ಅರಣ್ಯ ಉಪ ಸಂರಕ್ಷಣಾಧಿಕಾರಿಯವರು ದಿನಾಂಕ ೪-೭-೮೩ ರಿಂದ ೧೦-೭-೮೩ ರವರೆಗೆ ಕೈಗೊಂಡಿದ್ದಾರೆ ಹಾಗೂ ಇತರ ದಿನಗಳಲ್ಲಿ ಸ್ಥಳೀಯವಾಗಿ ಮಳೆ ಆಧಾರಿಸಿ ಮರ ನೆಡುವ ಕಾರ್ಯಕ್ರಮವನ್ನು ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ರಾಲಿ, ಕಾಲೇಜುಗಳು, ಸಾರ್ವಜನಿಕ ಸಂಸ್ಥೆಗಳು, ಸಾರ್ವಜನಿಕ ಕೈಗಾರಿಕೆಗಳು ಸ್ವಯಂ ಸೇವಾ ಸಂಸ್ಥೆಗಳವರು ಭಾಗವಹಿಸಿದ್ದಾರೆ. ಮರ ನೆಡುವ ಕಾರ್ಯಕ್ರಮದಲ್ಲಿ ಮಂತ್ರಿಗಳು, ಶಾಸಕರು, ಲೋಕಸಭಾ ಸದಸ್ಯರು ತಾಲ್ಲೂಕು ಬೋರ್ಡ್ ಸದಸ್ಯರು ಮತ್ತು ಪಂಚಾಯಿತಿ ಸದಸ್ಯರನ್ನೊಳಗೊಂಡು ಸಂಭ್ರಮವಾಗಿ ವನಮಹೋತ್ಸವವನ್ನು ಆಚರಿಸಲಾಗಿದೆ. ಇದೂ ಅಲ್ಲದೆ